# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯ, ಹೆಗ್ಗನಹಳ್ಳಿ ಉಪವಿಭಾಗ

## ವಾರ್ಡ್ ನಂ.70 : ರಾಜಗೋಪಾಲನಗರ

**ದಿನಾಂಕ: 07.11.2020 ರಂದು ಬೆಳಿಗ್ಗೆ 11.00 ಗಂಟೆಗೆ ಶ್ರೀಮತಿ ಕಮಲ ಹೆಚ್ ನೋಡಲ್ ಅಧಿಕಾರಿ, ವಾರ್ಡ್ 70 ರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಗ್ಗನಹಳ್ಳಿ ಉಪವಿಭಾಗ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:**

**ಸಭೆಯಲ್ಲಿ ಹಾಜರಿದ್ದವರು:**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀಮತಿ ಕಮಲ ಹೆಚ್ | ನೋಡಲ್ ಅಧಿಕಾರಿ–ವಾರ್ಡ್ ನಂ.70 |
| 2 | ಶ್ರೀ ಹೇಮಂತ್ ಕುಮಾರ್ ಎಸ್ ಕೆ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಹಾಗೂ ಸಂಚಾಲಕರು–ವಾರ್ಡ್ 70 |
| 3 | ಶಿವಲಿಂಗಯ್ಯ.ಕೆ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.70 |
| 4 | ತ್ರಿವೇಣಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.70 |
| 5 | ನಾಗಯ್ಯ | ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್, ಆರಕ್ಷಕ ಠಾಣೆ, ರಾಜಗೋಪಾಲನಗರ |
| 6 | ಗಿರೀಶ್ ಎಂ ಆರ್ | ಗುತ್ತಿಗೆದಾರರು, ಬೀದಿದೀಪಗಳ ನಿರ್ವಹಣೆ |
| 7 | ರಾಮಕೃಷ್ಣೇಗೌಡ ಎನ್.ಎಲ್ | ಪರಿವೀಕ್ಷಕರು–ಬಿ.ಡಬ್ಲ್ಯೂ.ಎಸ್.ಎಸ್.ಬಿ |

**: ಚರ್ಚೆಯಾದ ವಿಷಯಗಳು :**

1. ವಾರ್ಡ್ ವ್ಯಾಪ್ತಿಯಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚುತ್ತಿರುವ ಬಗ್ಗೆ
2. ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್–19 ರ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ
3. ನೋಡಲ್ ಅಧಿಕಾರಿ ರವರ ಅಪ್ಪಣೆಯ ಮೇರೆಗೆ ಚರ್ಚಿಸುವಂತಹ ಇತರೆ ವಿಷಯಗಳು.

**:ನಡಾವಳಿಯ ವರದಿ:**

➢ ಕಾರ್ಯದರ್ಶಿಗಳಾದ ಶ್ರೀ ಹೇಮಂತ್ ಕುಮಾರ್ ಎಸ್ ಕೆ ಮಾತನಾಡುತ್ತಾ ಸಭೆಗೆ ಹಾಜರಾದ ನೋಡಲ್ ಅಧಿಕಾರಿ ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತ ಕೋರಿದರು.

➢ ಶ್ರೀಮತಿ ಕಮಲ ಹೆಚ್, ನೋಡಲ್ ಅಧಿಕಾರಿ–ವಾರ್ಡ್ ನಂ.70, ರವರು ಅಧಿಕಾರಿಗಳನ್ನು ಪರಸ್ಪರ ಪರಿಚಯಿಸಿಕೊಂಡ ನಂತರ ಮಾತಾನಾಡಿ, ವಾರ್ಡ್ 70ರ ಅಭಿವೃದ್ಧಿಗೆ ಸಹಕರಿಸಲು ಎಲ್ಲರೂ ಒಗ್ಗಟ್ಟಾಗಿ ಕೈಜೋಡಿಸಲು ಕೋರಿದರು. ವಾರ್ಡ್ ವ್ಯಾಪ್ತಿಯಲ್ಲಿನ ಕುಂದುಕೊರತೆಗಳನ್ನು ತಿಳಿಸಲು ವಾರ್ಡ್ ವ್ಯಾಪ್ತಿಯಲ್ಲಿ ಕ್ಷೇಮಾಭಿವೃದ್ಧಿ ಸಂಘಗಳ ಪ್ರತಿನಿಧಿಗಳು ಸಹ ವಾರ್ಡ್ ಸಮಿತಿ ಸಭೆಯಲ್ಲಿ ಪಾಲ್ಗೊಳ್ಳುವುದು ಅವಶ್ಯಕವಿದ್ದು, ಸಭೆಯಲ್ಲಿ ಕುಂದು ಕೊರತೆಗಳನ್ನು ತಿಳಿಸಿದರೆ ಸಮಸ್ಯೆಗಳನ್ನು ಪರಿಹರಿಸಲು ಸಹಾಯವಾಗುತ್ತದೆ ಎಂದು ಅಭಿಪ್ರಾಯಿಸಿ ಸದರಿಯವರನ್ನು ಮುಂದಿನ ಸಭೆಗೆ ಆಹ್ವಾನಿಸಲು ಸೂಚಿಸಿದರು.

➤ ಶ್ರೀ ನಾಗಯ್ಯ, ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್, ಆರಕ್ಷಕ ಠಾಣೆ, ರಾಜಗೋಪಾಲನಗರ ರವರು ಈ ಹಿಂದಿನ ಸಭೆಯಲ್ಲಿ ಪೀಣ್ಯ 2ನೇ ಹಂತದಲ್ಲಿರುವ ಹೈ ಮಾಸ್ಟ್ ದೀಪವನ್ನು ದುರಸ್ತಿಗೊಳಿಸಲು ಕೋರಲಾಗಿತ್ತು. ಆ ದಿನವೇ ಸಂಬಂಧಪಟ್ಟ ಗುತ್ತಿಗೆದಾರರು ದುರಸ್ತಿ ಪಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಟ್ಟಿದ್ದಕ್ಕಾಗಿ ಅಭಿನಂದನೆ ತಿಳಿಸಿದರು.

➤ ಶ್ರೀ ಶಿವಲಿಂಗಯ್ಯ ಕೆ, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.70 ಮಾತನಾಡಿ ಅನ್ನಪೂರ್ಣೇಶ್ವರಿ ನಗರದ ಡಿ.ಡಬ್ಲ್ಯೂಸಿ ಸೆಂಟರ್ ಬಳಿ ಸಿಸಿ ಕ್ಯಾಮೆರಾವನ್ನು ಅಳವಡಿಸಿಕೊಡಲು ಕೋರಿದರು ಹಾಗೂ ಸದರಿ ಜಾಗದಲ್ಲಿ ಆಳೆತ್ತರದ ಗಿಡ ಘೆಂಡೆಗಳು ಬೆಳೆದಿದ್ದು ಹಾವುಗಳ ಹಾವಳಿ ಹೆಚ್ಚಾಗಿದ್ದು, ಇದರಿಂದ ಅಲ್ಲಿ ಕಾರ್ಯನಿರ್ವಹಿಸುವ ಪೌರ ಕಾರ್ಮಿಕರಿಗೆ ತೊಂದರೆಯಾಗುತ್ತಿದ್ದು ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿದರು.

- ಇದಕ್ಕೆ ಪ್ರತಿಕ್ರಿಯಿಸಿದ ಶ್ರೀ ಹೇಮಂತ್ ಕುಮಾರ್ ಎಸ್ ಕೆ, ಸಹಾಯಕ ಅಭಿಯಂತರರು, ವಾರ್ಡ್ 70ರವರು ಆರಕ್ಷಕ ಇಲಾಖೆಯ ಸಹಕಾರದೊಂದಿಗೆ ಈಗಾಗಲೇ ವಾರ್ಡಿನ ಸೂಕ್ಷ್ಮ ಹಾಗೂ ಪ್ರಮುಖ ಪ್ರದೇಶಗಳನ್ನು ಗುರುತಿಸಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ. ಶೀಘ್ರದಲ್ಲಿಯೇ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗುವುದು ಎಂದು ತಿಳಿಸಿದರು ಹಾಗೂ ಡಿ.ಡಬ್ಲ್ಯೂಸಿ ಸೆಂಟರ್ ಆವರಣದಲ್ಲಿ ಕಾಂಕ್ರೀಟ್ ಅಳವಡಿಸಲು ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಕಾರ್ಯಾದೇಶವನ್ನು ಸಹ ಪಡೆಯಲಾಗಿರುತ್ತದೆ. ಶೀಘ್ರದಲ್ಲಿಯೇ ಡಿ.ಡಬ್ಲ್ಯೂಸಿ ಸೆಂಟರ್ ಆವರಣದಲ್ಲಿ ಕಾಂಪೌಂಡ್ ಮತ್ತು ಕಾಂಕ್ರೀಟ್ ಅಳವಡಿಸಲಾಗುವುದು ಎಂದು ತಿಳಿಸಿದರು.

➤ ಶ್ರೀಮತಿ ಕಮಲ ಹೆಚ್, ನೋಡಲ್ ಅಧಿಕಾರಿರವರು ಮಾತಾನಾಡಿ ವಾರ್ಡ್ ನಂ.70 ರವರು ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಗುಂಡಿಗಳನ್ನು ಮುಚ್ಚಲು ತೆಗೆದುಕೊಂಡ ಕ್ರಮಗಳ ಬಗ್ಗೆ ಹಾಗೂ ಪ್ರಗತಿಯ ಬಗ್ಗೆ ತಿಳಿಸಲು ಸೂಚಿಸಿದರು.

- ಇದಕ್ಕೆ ಪ್ರತಿಕ್ರಿಯಿಸಿದ ಶ್ರೀ ಹೇಮಂತ್ ಕುಮಾರ್ ಎಸ್ ಕೆ, ಸಹಾಯಕ ಅಭಿಯಂತರರು, ವಾರ್ಡ್ 70 ರವರು ಈಗಾಗಲೇ ವಾರ್ಡ್ ವ್ಯಾಪ್ತಿಯಲ್ಲಿ ಶೇಕಡ 90ರಷ್ಟು ರಸ್ತೆ ಗುಂಡಿಗಳನ್ನು ಮುಚ್ಚಲಾಗಿದ್ದು, ಇನ್ನುಳಿದ ರಸ್ತೆ ಗುಂಡಿಗಳಿಗೆ ವೆಟ್ ಮಿಕ್ಸ್ ಹಾಕಲಾಗಿರುತ್ತದೆ. ತೀರಾ ಹದಗೆಟ್ಟ ರಸ್ತೆಗಳ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತಂದಿದ್ದು, ಅನುದಾನ ಲಭ್ಯವಾದ ತಕ್ಷಣ ಅಭಿವೃದ್ಧಿಪಡಿಸಲಾಗುವುದು ಎಂದು ತಿಳಿಸಿದರು.

➤ ಶ್ರೀ ಹೇಮಂತ್ ಕುಮಾರ್ ಎಸ್ ಕೆ, ಸಹಾಯಕ ಅಭಿಯಂತರರು, ವಾರ್ಡ್ 70 ರವರು ಮಾತಾನಾಡಿ, ಶ್ರೀಗಂಧನಗರದ ಬಾಲಾಜಿ ಅಪಾರ್ಟ್ ಮೆಂಟ್ ಬಳಿ ಬೀದಿ ದೀಪವು ಸರಿಯಾಗಿ ಉರಿಯುತ್ತಿಲ್ಲ ಎಂದು ಸಾರ್ವಜನಿಕರು ತಿಳಿಸಿದ್ದು, ಸದರಿ ಸಮಸ್ಯೆಯನ್ನು ಪರಿಹರಿಸಲು ಕೋರಿದರು.

- ಇದಕ್ಕೆ ಪ್ರತಿಕ್ರಿಯಿಸಿದ ಬೀದಿದೀಪಗಳ ನಿರ್ವಹಣೆಯ ಗುತ್ತಿಗೆದಾರರರಾದ ಶ್ರೀ ಗಿರೀಶ್ ಎಂ ಆರ್, ರವರು ಸಭೆ ಮುಗಿದ ನಂತರ ಪರಿಶೀಲಿಸಿ ಸರಿಪಡಿಸಲಾಗುವುದೆಂದು ತಿಳಿಸಿದರು.

➤ ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿ/ನೌಕರರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆಯೂ ಈ ಸಭೆಗಳಲ್ಲಿ ಪೂರ್ವತಯಾರಿಯೊಂದಿಗೆ ಪಾಲ್ಗೊಂಡು ವಾರ್ಡಿನ ಕುಂದುಕೊರತೆಗಳತ್ತ ಗಮನಹರಿಸಿ ವಾರ್ಡ್ ಅಭಿವೃದ್ಧಿ ಪಡಿಸಲು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

➤ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ ಹೇಮಂತ್ ಕುಮಾರ್ ಎಸ್ ಕೆ ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳು/ನೌಕರರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

9/11/2020

**ಸದಸ್ಯ ಕಾರ್ಯದರ್ಶಿ–ವಾರ್ಡ್ 70 ಹಾಗೂ**
**ಸಹಾಯಕ ಅಭಿಯಂತರರು,**

**(ಕಮಲ ಹೆಚ್)** 9.11.2020
**ನೋಡಲ್ ಅಧಿಕಾರಿ ವಾರ್ಡ್–70**

ಪ್ರತಿಯನ್ನು:
1) ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
2) ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ.

3) ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
4) ಸಹಾಯಕ ಕಂದಾಯ ಅಧಿಕಾರಿ (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
5) ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.70 ರವರ ಮಾಹಿತಿಗಾಗಿ
6) ಸಹಾಯಕ ಅಭಿಯಂತರರು (ವಿದ್ಯುತ್ ಬೆಸ್ಕಾಂ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
7) ಸಹಾಯಕ ಅಭಿಯಂತರರು (ವಿದ್ಯುತ್ (ಬೀದಿದೀಪ) ಬಿಬಿಎಂಪಿ ರವರ ಮಾಹಿತಿಗಾಗಿ ಸೂಕ್ತ ಕ್ರಮಕ್ಕಾಗಿ
8) ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ರಾಜಗೋಪಾಲನಗರ ಪೋಲೀಸ್ ಠಾಣೆ ರವರ ಮಾಹಿತಿಗಾಗಿ
9) ಕಛೇರಿ ಕಡತಕ್ಕೆ